ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ವಿಶೇಷಾಧಿಕಾರಿಗಳ ಕಛೇರಿ, ಕೇಂದ್ರೀಕೃತ ದಾಖಲಾತಿ ಘಟಕ, ಬೆಂಗಳೂರು

## ಬಿ.ಇಡಿ ಕೋರ್ಸಿನ ಕೌನ್ಸಲಿಂಗ್ ಪ್ರಕಟಣೆ

2009–10ನೇ ಸಾಲಿನ ಬಿ.ಇಡಿ ಕೋರ್ಸಿನ ದಾಖಲಾತಿಗಾಗಿ ಅರ್ಜಿ ಸಲ್ಲಿಸಿ ಸಾಮಾನ್ಯ ಪ್ರವೇಶ ಪರೀಕ್ಷೆಗೆ ಹಾಜರಾಗಿರುವ ಆಂತರಿಕ ಅಂಕಗಳು ಸೇರಿದಂತೆ ಪದವಿಯಲ್ಲಿ ಶೇಕಡ 40 ಅಂಕಗಳನ್ನು ಗಳಿಸಿರುವ ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1 ಮತ್ತು ಅಂಗವಿಕಲ ಅಭ್ಯರ್ಥಿಗಳಿಗೆ ಹಾಗೂ ಆಂತರಿಕ ಅಂಕಗಳು ಸೇರಿದಂತೆ ಪದವಿಯಲ್ಲಿ ಶೇಕಡ 50 ಅಂಕಗಳನ್ನು ಗಳಿಸಿರುವ ಇತರೆ ಪ್ರವರ್ಗಗಳ ಅಭ್ಯರ್ಥಿಗಳಿಗೆ ಕರ್ನಾಟಕ ಸರ್ಕಾರದ ಉಚ್ಚ ನ್ಯಾಯಾಲಯದ ಮಧ್ಯಂತರ ಆದೇಶದಂತೆ ದಾಖಲಾತಿಯ ಕೌನ್ಸಲಿಂಗ್‌ಅನ್ನು ದಿನಾಂಕ 27–04–2010 ರಂದು ಬೆಳಿಗ್ಗೆ 9.00 ಗಂಟೆಗೆ ಕೇಂದ್ರೀಕೃತ ದಾಖಲಾತಿ ಘಟಕ, ಬೆಂಗಳೂರು ಇಲ್ಲಿ ನಡೆಸಲಾಗುವುದು. ಕೌನ್ಸಿಲಿಂಗ್‌ಗೆ ವಿಳಂಬವಾಗಿ ಬರುವ ಅಭ್ಯರ್ಥಿಗಳು ತಮ್ಮ ರ್‍ಯಾಂಕ್‌ಅನ್ನು ಕಳೆದುಕೊಳ್ಳುತ್ತಾರೆ. ಕೌನ್ಸಿಲಿಂಗ್‌ಗೆ ಹಾಜರಾಗುವ ಅಭ್ಯರ್ಥಿಗಳು ಮೂಲದಾಖಲೆಗಳ ಪರಿಶೀಲನೆಯ ನಂತರ ಸಿಂಧುವಾಗಿದ್ದಲ್ಲಿ ನಿಗದಿತ ದಾಖಲಾತಿ ಶುಲ್ಕವನ್ನು ಪಾವತಿಸಿ ಶಿಕ್ಷಣ ಸಂಸ್ಥೆಗಳಲ್ಲಿ ಈಗಾಗಲೇ ದಾಖಲಾತಿ ಮಾಡಿ ಉಳಿಕೆ ಲಭ್ಯವಿರುವ ಸೀಟನ್ನು ಆಯ್ಕೆ ಮಾಡಿಕೊಂಡು ದಾಖಲಾತಿ ಪಡೆಯಬಹುದು. ಕೌನ್ಸಿಲಿಂಗ್‌ಗೆ ಹಾಜರಾಗುವ ಅಭ್ಯರ್ಥಿಗಳು ಮಾಹಿತಿ ಪುಸ್ತಿಕೆಯಲ್ಲಿ ತಿಳಿಸಿರುವಂತೆ ನಿಗದಿಪಡಿಸಿದ ಶುಲ್ಕವನ್ನು ಬ್ಯಾಂಕ್ ಹುಂಡಿಯ ಮೂಲಕ ಪಾವತಿಸಬೇಕಾಗುತ್ತದೆ. ಕೌನ್ಸಿಲಿಂಗ್‌ಗೆ ಸಂಬಂಧಿಸಿದ ಮಾಹಿತಿಯು www.schooleducation.kar.nic.in ವೆಬ್‌ಸೈಟ್‌ನಲ್ಲಿಯೂ ಲಭ್ಯವಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕೇಂದ್ರೀಕೃತ ದಾಖಲಾತಿ ಘಟಕ, ಬೆಂಗಳೂರು ಅನ್ನು ಸಂಪರ್ಕಿಸುವುದು. ದೂರವಾಣಿ ಸಂಖ್ಯೆ : 22271866 /22483145/ 22483140

ವಿಶೇಷಾಧಿಕಾರಿಗಳು.